ಕೈಗಳನ್ನು ಎತ್ತಿ ಬಿಕ್ಕಿ ಬಿಕ್ಕಿ ಅತ್ತಳು. ಅಳುತ್ತಲೇ ಇದ್ದಳು. ಇದುವರೆಗೂ ಅಳುತ್ತಿದ್ದಾಳೆ. ನಸೀಮಾಳ ಬಗ್ಗೆ ಕಳೆದ ಎಂಟು ವರ್ಷದಿಂದಲೂ ಅವಳಿಗೆ ಯಾವುದೇ ವಿಷಯ ತಿಳಿದು ಬಂದಿಲ್ಲ. ಅವಳ ಗಂಡ ಮತ್ತು ಇಬ್ಬರು ಗಂಡು ಮಕ್ಕಳು ಕೂಡ ನಸೀಮಾಳ ಅಸ್ತಿತ್ವದ ಕುರುಹು ಕೂಡಾ ಉಳಿಯದಂತೆ ಅವಳ ಮೇಲೆ ತಣ್ಣನೆಯ ದಬ್ಬಾಳಿಕೆಯನ್ನು ನಡೆಸಿದ್ದರು. ಆಕೆ ಅನಾಥ ಪ್ರಜ್ಞೆಯಿಂದ ನರಳುತ್ತಿದ್ದಳು. ಆಗಾಗ್ಗೆ ಜೋಗುಳವನ್ನು ಕೂಡ ಹಾಡುತ್ತಿದ್ದಳು. ಕಾಲ ಯಾರನ್ನೂ ಕಾಯುವುದಿಲ್ಲ. ಇಬ್ಬರು ಗಂಡು ಮಕ್ಕಳ ಮದುವೆಯೂ ಆಯಿತು. ಮನೆ ತುಂಬಿತು. ಆದರೆ ನಸೀಮಾಳ ಹಸಿ ಹಸಿ ನೆನಪುಗಳು ಅವಳನ್ನು ನಿರಂತರವಾಗಿ ಕಾಡಿಸುತ್ತಿದ್ದವು. ತಾನು ಅಪಾರವಾಗಿ ಬಯಸಿದ್ದ, ಆದರೂ ಹೆಸರಿಡದ ನಸೀಮಾಳ ಮಗಳು ಅವಳ ಮನೋಲೋಕದಲ್ಲಿ ಅವಳ ಮಡಿಲನ್ನು ತುಂಬುತ್ತಿದ್ದಳು.

ಇಬ್ಬರು ಸೊಸೆಯಂದಿರು ಆ ಸ್ಥಾನವನ್ನು ತುಂಬಿದರೂ ಕೂಡಾ ಆಕೆಯ ಕಣ್ಣಿಗೆ ಮುಟ್ಟಿನ ಬಟ್ಟೆಗಳು ಕಂಡು ಬಂದಿರಲಿಲ್ಲ. ಅಂಗಳದ ಮೂತಿಯಲ್ಲಿ ತನ್ನ ಜಾಗವನ್ನು ಕಂಡುಕೊಂಡಿದ್ದ ಮತ್ತು ಮುಚ್ಚಳವನ್ನು ಬಿಗಿದಿದ್ದ ದೊಡ್ಡ ಡಸ್ಟ್ ಬಿನ್ನಿನ ಹೊಟ್ಟೆಯಲ್ಲಿ ಅಡಗಿದ್ದ ಪ್ಲಾಸ್ಟಿಕ್ಕಿನ ಪುಟ್ಟ ಸುರುಳಿಗಳು ಏನನ್ನು ಅಡಗಿಸಿಕೊಂಡಿವೆ ಮತ್ತು ಆ ಸುರುಳಿಗಳು ಆ ಧಾಬಿನ್‌ಗಳ ಕಣ್ಣುಗಳ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಅವಳು ಪರೀಕ್ಷೆಮಾಡಲು ಹೋಗಲಿಲ್ಲ. ಆದರೆ ಸುಮಾರು ಹೊತ್ತು ಗೋಡೆ ದಾಟಿದ ದಾವುದ್‌ನ ಯಾವುದೇ ಚಲನವಲನ ಕಂಡು ಬಾರದೇ ಇದ್ದುದರಿಂದ ಅವಳು ಅಸ್ವಸ್ಥಳಾದಳು.

ಈ ಎಲ್ಲಾ ಭಯಾನಕ ಮತ್ತು ಆತಂಕಪೂರಿತ ಆಲೋಚನೆಗಳ ಮಧ್ಯದಲ್ಲಿ ಆವಳ ಕೈಯಲ್ಲಿ ಇದ್ದ ಚಹಾದ ಕಪ್ಪು ಹಾಗೆಯೇ ಉಳಿಯಿತು. ಬಿಡುವು ಇಲ್ಲದ ಕೆಲಸ ಕಾರ್ಯಗಳ ನಡುವೆಯೂ ಅನ್ಯ ಮನಸ್ಕಳಾಗಿದ್ದ ತನ್ನ ಅತ್ತೆಯನ್ನು ಗಮನಿಸಿದ ಅವಳ ಹಿರಿ ಸೊಸೆಯು “ಟೀಯನ್ನು ತಣಿಸಿಕೊಡಲೆ?” ಎಂದು ಕೇಳಿದಳು. ಸೆಹೆರಿಯ ಊಟದ ನಿರ್ದಿಷ್ಟ ಕಾಲದ ಒಳಗೆ ಆ ಊಟದ ಸಮಸ್ತ ಘಟ್ಟಗಳು ಮುಗಿಯಬೇಕು. ಆ ಕಾಲಾವಧಿಯ ಒಳಗೆ ಚಹಾವನ್ನು ದೊಡ್ಡ ಮಗ್‌ನಲ್ಲಿ ಹಾಕಿ ಗರಗರನೆ ತಿರುವಿ ಅದನ್ನು ತಣಿಸಿ ಜೀನತ್‌ಳ ಕೈಗೆ ಕೊಟ್ಟಳು ಅವಳು. ಆ ಕಾವು ಕಳೆದುಕೊಂಡ ಚಹಾವನ್ನು ತುಟಿಗೆ ಇನ್ನೂ ಸೋಕಿಸಿರಲಿಲ್ಲ. ಅಷ್ಟರಲ್ಲೇ ಮಸಿದಿಯ ಮೈಕ್‌ನಿಂದ ಒಂದು ಸೈರನ್ ಕೇಳಿಸಿತು. ಅಂದರೆ ಸೆಹೆರಿ ಊಟದ ಗಡುವು ಮುಗಿಯಿತು ಎಂದರ್ಥ. ಅವಳು ಚಹಾದ ಕಪ್ಪನ್ನು ಮತ್ತೆ ತುಟಿಯತ್ತ ತರಲಿಲ್ಲ. ಹಾಗೆಯೇ ಡೈನಿಂಗ್ ಟೇಬಲ್ ಮೇಲೆ ಅದನ್ನು ಇಟ್ಟು ಮೇಲಕ್ಕೆ ಎದ್ದಳು. ಹಾಗೆ ಏಳುವಾಗ ಇಷ್ಟು ವರ್ಷಗಳ ಕಾಲ ಚಹಾ ಕುಡಿದು ಅಭ್ಯಾಸವಾಗಿದೆ; ಇಂದು ಚಹಾದ ಒಂದೇ ಗುಟುಕು ಕೂಡಾ ಹೊಟ್ಟೆಗೆ ಹೋಗಿಲ್ಲ. ಇನ್ನೂ ಬೆಳಗಿನಿಂದಲೇ ತಲೆನೋವು ಶುರುವಾಗುತ್ತೆ ಎಂದು ಅಂದುಕೊಂಡಳು. ಆ ಮೂಲಕ ಬರಲಿರುವ ತಲೆನೋವನ್ನು ಅನುಭವಿಸಲು ತನ್ನ ಮನಸ್ಸಿಗೆ ಆಜ್ಞೆಯನ್ನು ಮತ್ತು ಸಕಾರಣವನ್ನು ನೀಡುತ್ತಾ ತಲೆನೋವಿನಿಂದ ನರಳಲು ಸಿದ್ಧತೆ ನಡೆಸತೊಡಗಿದಳು. ಆದರೆ ಅವಳ ಈ ಎಲ್ಲಾ ವೈಯಕ್ತಿಕ ಸಂಕಟಗಳು ಮತ್ತು ನೋವುಗಳ ನಡುವೆಯೂ ಅವಳಿಗೆ ದಾವೂದ್ ಪದೇ ಪದೇ ನೆನಪಿಗೆ ಬರತೊಡಗಿದ.

ಹಾಳಾದವನು ಸೆಹರಿ ಮುಗಿಸಿ ಬಂದನೋ ಇಲ್ಲವೋ, ಒಂದಿಷ್ಟು ಚಹಾ ಕುಡಿದನೋ ಇಲ್ಲವೋ– ಬೆಳಗಿನ ನಮಾಜ್‌ನಾದರೂ ಮುಗಿಸಿ ಆ ವಿಷಯುಕ್ತ ಕೊಂಪೆಗೆ ಕಾಲಿಟ್ಟಿದ್ದರೆ ಆಗುತ್ತಿತ್ತು ಎಂದು ಅವಳು ಹಲಬುತ್ತಾ ನಿಂತಲ್ಲಿ ನಿಲ್ಲದೆ ಚಡಪಡಿಸುತ್ತಾ ಒಳಗೂ ಹೊರಗೂ ಕಾಲುಸುಟ್ಟ ಬೆಕ್ಕಿನಂತೆ ಅಲೆದಾಡತೊಡಗಿದಳು. ಇವಳ ಯಾವ ಆತಂಕಗಳ ಅರಿವು ಕೂಡಾ ಇಲ್ಲದ ಅವಳ ಪತಿ ಮತ್ತು ಮಕ್ಕಳು ತಲೆಗೆ ಟೋಪಿಯನ್ನು ಏರಿಸಿದರು. ಆಗಾಗ್ಗೆ ಕಾಡುತ್ತಿದ್ದ ಕೆಮ್ಮಿನಿಂದ ಹೈರಾಣಾಗಿದ್ದ ಅವಳ ಪತಿ ಒಂದು ಶಾಲನ್ನು ಸುತ್ತಿಕೊಂಡ ಮತ್ತು ಅವರೆಲ್ಲರೂ ವೇಳೆಯಾಗುತ್ತಿದ್ದನ್ನು ಗಮನಿಸಿ